ನೀಡಿರುವ ಬಗ್ಗೆ.

ಶ್ರೀ ಶಿವಶೇಖರಪ್ಪ ಗೌಡ ಶಿರಾಳ:- (ಶಹಾಪೂರ)- ದಿನಾಂಕ24-12-1991ರಂದು ಲೋಕಸೇವಾ ಆಯೋಗದಿಂದ ನಡೆಸಿದ ಇಲಾಖಾ ಪರೀಕ್ಷೆಯ ಅಕೌಂಟ್ಸ್ ಹೈಯರ್ ಪ್ರಶ್ನೆಪತ್ರಿಕೆ ಭಾಗ-1 ಪ್ರಶ್ನೆ ಸಂಖ್ಯೆ 2ರಲ್ಲಿ ಕನ್ನಡ ಭಾಷೆಯಲ್ಲಿ ಪರಿವರ್ತಿತ ರಜೆ 18-1-1989ರಿಂದ 12-2-1989 ಎಂದಿರುವುದು. ಆದರೆ ಆದೇ ಪ್ರಶ್ನೆಯು ಆಂಗ್ಲ ಭಾಷೆಯಲ್ಲಿ 18-11989 ರಿಂದ 2-1-1989ರಂದು ಎಂದು ಮುದ್ರಿತವಾಗಿರುವುದು. ಪ್ರಶ್ನೆಪತ್ರಿಕೆಯಂತೆ ಉತ್ತರವೂ ಸಹ ಎರಡು ಭಾಷೆಗಳಲ್ಲಿ ಬರೆಯಬಹುದಾಗಿದೆ. ಹೀಗಾಗಿ ಒಂದೇ ಪ್ರಶ್ನೆಗೆ ಎರಡು ರೀತಿಯ ಉತ್ತರ ನೀಡಲು ಅವಕಾಶವಿರುವುದು. ಕೆಲವು ಪರೀಕ್ಷಾ ಕೇಂದ್ರಗಳಲ್ಲಿ ಲೋಕಸೇವಾ ಆಯೋಗದವರು 12-2-1989 ಎಂದು ತಿದ್ದುಪಡಿ ಮಾಡಿಕೊಳ್ಳಲು ತಿಳಿಸಿರುತ್ತಾರೆ. ಆದರೆ ಜಯನಗರದ ಎಸ್. ಎಸ್. ವಿ. ಕೆ. ಹೈಸ್ಕೂಲ್ ಪರೀಕ್ಷಾ ಕೇಂದ್ರದಲ್ಲಿ ತಿದ್ದುಪಡಿಯನ್ನು ಮಾಡಲು ತಿಳಿಸಿಲ್ಲ. ಹೀಗಾಗಿ ಲೋಕಸೇವಾ ಇಲಾಖೆಯವರೇ ಈ ರೀತಿಯ ತಪ್ಪು ಪ್ರಶ್ನೆ ಪತ್ರಿಕೆಯನ್ನು ನೀಡಿ ವಿದ್ಯಾರ್ಥಿಗಳಲ್ಲಿ ಗೊಂದಲಮಯ ವಾತಾವರಣ ಸೃಷ್ಟಿಸಿ ವಿದ್ಯಾರ್ಥಿಗಳ ಎರಡು ರೀತಿಯಲ್ಲಿರುವ ಪ್ರಶ್ನೆಗಳಿಗೆ ಉತ್ತರಿಸಿದ ಉತ್ತರಗಳಿಗೆ ದೊರಕಬೇಕಾದ ಅಂಕಗಳನ್ನು ಸಂಪೂರ್ಣವಾಗಿ ನೀಡಲು ಲೋಕಸೇವಾ ಆಯೋಗವು ಕ್ರಮ ಕೈಗೊಳ್ಳಬೇಕೆಂದು ಹಾಗೂ ಈ ರೀತಿ ತಪ್ಪು ಪ್ರಶ್ನೆ ಪತ್ರಿಕೆ ನೀಡಿದ ಅಧಿಕಾರಿಗಳ ಮೇಲೆ ಶಿಸ್ತಿನ ಕ್ರಮ ಕೈಗೊಂಡು, ಇನ್ನು ಮುಂದೆ ಈ ರೀತಿ ತಪ್ಪು ಪ್ರಶ್ನೆ ಪತ್ರಿಕೆಯನ್ನು ನೀಡದಂತೆ ಕ್ರಮ ಕೈಗೊಳ್ಳಬೇಕೆಂದು ಸರ್ಕಾರಕ್ಕೆ ಒತ್ತಾಯಿಸುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ :- ಸನ್ಮಾನ್ಯ ಉಪಾಧ್ಯಕ್ಷಿಣಿಯವರೇ, ಏನು ಮಾನ್ಯ ಸದಸ್ಯರು ವಿಚಾರ ಎತ್ತಿದ್ದಾರೆ ಈ ವಿಷಯವನ್ನು ಕರ್ನಾಟಕ ಲೋಕಸೇವಾ ಆಯೋಗದ ಗಮನಕ್ಕೆ ತರಲಾಗುವುದು.

(5)ಬೆಂಗಳೂರಿನ ಜಯನಗರದ ಬಸ್ ನಿಲ್ದಾಣದ ಅಭಿವೃದ್ಧಿ.

ಶ್ರೀ ರಾಮಲಿಂಗರೆಡ್ಡಿ (ಜಯನಗರ):- ಬೆಂಗಳೂರು ಜಯನಗರದ ಬಸ್ ನಿಲ್ದಾಣ ಬಹಳ ಚಿಕ್ಕದಾಗಿದ್ದು ಇದರಿಂದ ಬಹಳ ಅನಾನುಕೂಲ ಉಂಟಾಗಿದೆ. ಪ್ರತಿದಿನ 150ಕ್ಕೂ ಹೆಚ್ಚು ಬಸ್‌ಗಳು ಹಾಗೂ 1400 ಕ್ಕೂ ಹೆಚ್ಚು ಟ್ರಿಪ್‌ಗಳು ಈ ನಿಲ್ದಾಣದಲ್ಲಿ ಬರುತ್ತಾ ಇದ್ದು ಒಂದು ಬಸ್ ನಿಂತರೆ ಮತ್ತೊಂದು ಬಸ್ ಮುಂದಕ್ಕೆ ಹೋಗಲು ಅಸಾಧ್ಯವಾಗಿದೆ. ಆದ್ದರಿಂದ ಕೂಡಲೇ ಈ ಬಸ್ ನಿಲ್ದಾಣವನ್ನು ಅಭಿವೃದ್ಧಿಗೊಳಿಸಬೇಕು. ಪವಿತ್ರ ಹೋಟೆಲ್ ಮುಂದೆ ಇರತಕ್ಕ ರಸ್ತೆಯಲ್ಲಿ ಶಿವಾಜಿನಗರಕ್ಕೆ ಹೋಗತಕ್ಕ ಬಸ್ ನಿಲ್ದಾಣವನ್ನು ಪ್ರಾರಂಭಿಸಬೇಕು. 2-3 ಕಡೆಗಳ ಪ್ರತ್ಯೇಕ ಬಸ್ ನಿಲ್ದಾಣಗಳನ್ನು ಮಾಡಿದರೆ ಆದರಿಂದ ಪ್ರಯೋಜನವಾಗುತ್ತದೆ. ಕೂಡಲೇ ಜಯನಗರ ಬಸ್ ನಿಲ್ದಾಣದ ಪರಿಸ್ಥಿತಿಯನ್ನು ಉತ್ತಮಪಡಿಸಲು 2-3 ರಸ್ತೆಗಳಲ್ಲಿ ಬಸ್ ನಿಲ್ದಾಣವನ್ನು ನಿರ್ಮಿಸಬೇಕೆಂದು ಸನ್ಮಾನ್ಯ ಸಾರಿಗೆ ಸಚಿವರನ್ನು ಕೋರುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ :- ಮಾನ್ಯ ಸದಸ್ಯರಾದ ರಾಮಲಿಂಗಾರೆಡ್ಡಿಯವರು ಎತ್ತಿದಂಥ ಸಮಸ್ಯೆಯನ್ನು ಸಾರಿಗೆ ಮತ್ತು ವಕ್ಫ್ ಸಚಿವರ ಗಮನಕ್ಕೆ ತರಲಾಗುವುದು.

(6) ಹೇಮಾವತಿ ಎಡದಂಡೆ ನಾಲೆಯಿಂದ ಮಂಡ್ಯ ಜಿಲ್ಲೆಗೆ ನೀರು.

ಶ್ರೀ ಎನ್. ತಮ್ಮಣ್ಣ (ಕೆರೆಗೋಡು):- ಹೇಮಾವತಿ ಎಡದಂಡೆ ನಾಲೆಯಿಂದ ಮಂಡ್ಯ ಜಿಲ್ಲೆಯ ಬಸರಾಳು ಮತ್ತು ದುದ್ದ ಹೋಬಳಿಯ ಕೆಲವು ಭಾಗಗಳಿಗೆ ಅಂದರೆ ಸುಮಾರು 25,000 ಎಕರೆ ಪ್ರದೇಶಗಳಿಗೆ ಡಿಸೆಂಬರ್ 1991ರ ಒಳಗಾಗಿ ನೀರು ಸರಬರಾಜು ಮಾಡಬೇಕಾಗಿತ್ತು. ಆದರೆ ಚಟ್ಟಂಗೆರೆ ಬಳಿ ಇರುವ ಸುರಂಗ ಮಾರ್ಗದ ಕಾಮಗಾರಿಯಲ್ಲಾದ ಲೋಪದೋಷಗಳ ಬಗ್ಗೆ ತನಿಖೆ ನಡೆಸಲು ಲೋಕಾಯುಕ್ತಕ್ಕೆ ವಹಿಸಿ ಸುಮಾರು ವರ್ಷಗಳಾಗಿವೆ. ಈ ಕಾರಣದಜಿಂದ ಈ ಭಾಗದ ರೈತರಿಗೆ ನಿಗದಿತ ವೇಳೆಯಲ್ಲಿ ನೀರು ಲಭಿಸದೆ ತೊಂದರೆಗೊಳಗಾಗುವುದರಿಂದ ಆದಷ್ಟು ಬೇಗ ಲೋಕಾಯುಕ್ತದವರಿಂದ ಒಪ್ಪಿಗೆ ಪಡೆದು ಉಳಿದಿರುವ ಕಾಮಗಾರಿ ಕೆಲಸಗಳನ್ನು ಬೇಗ ಮಾಡಿ ಪೂರ್ಣಗೊಳಿಸಲು ವ್ಯವಸ್ಥೆಯನ್ನು ಮಾಡಿ ಅಭಾವಪೀಡಿತ ಪ್ರದೇಶಕ್ಕೂಳಗಾಗಿರುವ

ರೈತರ ನೀರಿನ ಬವಣೆಯನ್ನು 1992ನೇ ಜೂನ್ ತಿಂಗಳ ಒಳಗಾಗಿ ಪರಿಹರಿಸಬೇಕೆಂದು ತಮ್ಮ ಮೂಲಕ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರನ್ನು ಒತ್ತಾಯಮಾಡುತ್ತೇನೆ.

ಶ್ರೀ ಮಲ್ಲಾರಿಗೌಡ. ಎನ್. ಪಾಟೀಲ್ (ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು):-ಮಾನ್ಯ ಅಧ್ಯಕ್ಷರೇ, ಚಟ್ಟಂಗೆರೆ ಸುರಂಗವು ಹೇಮಾವತಿ ಎಡದಂಡೆ ನಾಲೆಯ 152ನೇ ಕಿ. ಮೀ. ನಲ್ಲಿದೆ. ಈ ಸುರಂಗದ ನಿರ್ಮಾಣ ಕೆಲಸವನ್ನು ಟೆಂಡರ್ ಆಧಾರದ ಮೇಲೆ ಮಾರ್ಚ್ 85ರಲ್ಲಿ ವಹಿಸಿಕೊಡಲಾಯಿತು. ಕೆಲಸವನ್ನು ಏಪ್ರಿಲ್ 85ರಲ್ಲಿ ಆರಂಭಿಸಲಾಯಿತು. ಸುರಂಗದ ಅಗೆತದ ಕೆಲಸವು ಪೂರ್ಣ ಗೊಳ್ಳುವ ಹಂತದಲ್ಲಿದ್ದಾಗ ಕಾಮಗಾರಿಯಲ್ಲಿ ಕೆಲವು ಲೋಪದೋಷಗಳು ಕಂಡು ಬಂದದ್ದರಿಂದ ಸೆಪ್ಟೆಂಬರ್ 88ರಲ್ಲಿ ಲೋಕಾಯುಕ್ತರವರ ತನಿಖೆಗೆ ವಹಿಸಲಾಯಿತು. ಸೆಪ್ಟೆಂಬರ್ 88ರವರೆಗೆ ಆದ ವೆಚ್ಚ ರೂ. 2.48 ಕೋಟಿ ತನಿಖೆಯು ಪ್ರಗತಿಯಲ್ಲಿದ್ದು ವರದಿ ನಿರೀಕ್ಷಿಸಲಾಗಿದೆ. ಸುರಂಗದ ಲೈನಿಂಗ್ ಕೆಲಸ ಉಳಿದಿದ್ದು ಇದನ್ನು ಪೂರ್ಣಗೊಳಿಸಿದಲ್ಲಿ ಮುಂದಿನ ಭಾಗದ ಸುಮಾರು 30,000 ಎಕರೆ ಪ್ರದೇಶಕ್ಕೆ ನೀರೊದಗಿಸಲು ಸಾಧ್ಯವಾಗುತ್ತದೆ. ಈ ಅಂಶವನ್ನು ಮನಗಂಡು ಸರ್ಕಾರವು ಲೋಕಾಯುಕ್ತರವರ ತನಿಖೆಯಿಂದ ಉದ್ಭವಿಸಿದ ಕೆಲವು ಸಮಸ್ಯೆಗಳ ಬಗ್ಗೆ ನಿರ್ಧಾರ ತೆಗೆದುಕೊಂಡು ಸುರಂಗದ ಕೆಲಸಗಳನ್ನು ಮುಂದುವರೆಸಿ ಪೂರ್ಣಗೊಳಿಸಲು ಆದೇಶ ನೀಡಿದೆ. ಸದಸ್ಯರು ಪ್ರಸ್ತಾಪಿಸಿರುವ ಮಂಡ್ಯ ಜಿಲ್ಲೆಯ ಬಸರಾಳು ಮತ್ತು ದುದ್ದ ಹೋಬಳಿಯ ಭಾಗಗಳಿಗೆ 1993-94ರಲ್ಲಿ ನೀರಾವರಿ ಸೌಲಭ್ಯ ಕಲ್ಪಿಸಲು ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

(7)ಕರ್ನಾಟಕತ ವಿದ್ಯುಚ್ಛಕ್ತಿ ಮಂಡಳಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಕಲಾ ಪದವೀಧರರಿಗೆ ಸೌಲಭ್ಯವನ್ನು ಒದಗಿಸುವ ಬಗ್ಗೆ.

ಶ್ರೀ ಬಾಬುರಾವ್ ಚವಾಣ್:-ಕರ್ನಾಟಕ ವಿದ್ಯುಚ್ಛಕ್ತಿ ಮಂಡಲಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ವಿಜ್ಞಾನ ಮತ್ತು ವಾಣಿಜ್ಯ ಪದವೀಧರರ ಸಹಾಯಕ ಉಗ್ರಾಣಿಕರಿಗೆ ಮಂಡಲಿಯ ಆದೇಶ ಸಂಖ್ಯೆ ಕವಿಮ:ಡಬ್ಲ್ಯೂ:ಎಲ್‌ಪಿಸಿ: 18: 74-75 ದಿನಾಂಕ 27-7-1976ರ ಮೇರೆಗೆ ಪ್ರಸ್ತುತ ನಾಲ್ಕು ಹೆಚ್ಚುವರಿ ವೇತನ ಮುಂಬಡ್ತಿಯನ್ನು ನೀಡಲಾಗುತ್ತಿತ್ತು ಈ ಸೌಲಭ್ಯವನ್ನು ಕಲಾ ಪದವೀಧರರಿಗೆ ಕೊಡಲಾಗುತ್ತಿಲ್ಲ ಏಕೆ? ಮಂಡಲಿಯು ನೇಮಕಾತಿ ನಿಯಮಾವಳಿಗಳನ್ನು ಸೃಷ್ಟಿಸುವಾಗ (ಸಹಾಯಕ ಉಗ್ರಾಣಿಕ ಹುದ್ದೆಗೆ) ಪದವಿಯ ಬಗ್ಗೆ ನಿರ್ದಿಷ್ಟವಾದ ಸೂಚನೆಯನ್ನು ನಿಗದಿಪಡಿಸಿರುವುದಿಲ್ಲ. ಆದರೆ ನೇಮಕಾತಿ ಹೊಂದಿದ ನಂತರ ಸಹಾಯಕ ಉಗ್ರಾಣಿಕ ಪಡೆದಿರುವ ಪದವಿಯಲ್ಲಿ ತಾರತಮ್ಯ ಮಾಡಿ ಕೇವಲ ವಾಣಿಜ್ಯ ಮತ್ತು ವಿಜ್ಞಾನ ಪದವೀಧರರಿಗೆ ಮಾತ್ರ ಹೆಚ್ಚುವರಿ ವೇತನ ಮುಂಬಡ್ತಿ ನೀಡಿ ಈ ಸೌಲಭ್ಯದಿಂದ ಕಲಾ ಪದವೀಧರರಿಗೆ ವಂಚಿತಗೊಳಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಸಮಾನ ಪದವಿಯನ್ನು ಹೊಂದಿ ಈ ಮೇಲೆ ಹೇಳಿದ ಸೌಲಭ್ಯದಿಂದ ವಂಚಿತವಾಗಿರುವ ಕಲಾ ಪದವೀಧರರಿಗೆ ಇದನ್ನು ವಿಸ್ತರಿಸಲು ಮಂಡಳಿಗೆ ಇರುವ ತೊಂದರೆ ಏನು ? ಹಾಗಿದ್ದಲ್ಲಿ ಇದನ್ನು ಈಗಲಾದರೂ ಸರ್ಕಾರ ಸರಿಪಡಿಸಿ ಸದರಿ ಸೌಲಭ್ಯವನ್ನು ಕಲಾ ಪದವೀಧರರಿಗೂ ವಿಸ್ತರಿಸುವುದೇ ? ಅಂದರೆ ಇದನ್ನು ಯಾವಾಗ ಅಮಲಿನಲ್ಲಿ ತರಲಾಗುತ್ತದೆ ? ಈ ಮಂಡಳಿಯಲ್ಲಿ ಗುಮಾಸ್ತ ಸಿಬ್ಬಂದಿ ಅಥವಾ ವಿಜಾನೆ ಶಾಖೆಯಲ್ಲಿ ಕಲಾ ಪದವಿಯನ್ನು ಹೊಂದಿರುವ ಸಿಬ್ಬಂದಿಯು ಪ್ರಸ್ತುತ ನಾಲ್ಕು ವೇತನ ಹೆಚ್ಚುವರಿ ಮುಂಬಡ್ತಿಗಳನ್ನು ಪಡೆಯುತ್ತಿದ್ದು ಈ ಸೌಲಭ್ಯದಿಂದ ಸಮಾನ ಪದವಿ ಹಾಗೂ ಹುದ್ದೆಯನ್ನು ಹೊಂದಿರುವ ಸಹಾಯಕ ಉಗ್ರಾಣಿಕರಿಗೆ ಇದನ್ನು ನೀಡುತ್ತಿಲ್ಲ ಏಕೆ ? ಸರ್ಕಾರ ಇದನ್ನು ಈಗಲಾದರೂ ಸರಿಪಡಿಸಿ ಅಮಲಿನಲ್ಲಿ ತರಲು ಯೋಚಿಸಿದೆಯೆ ? ಅಂದರೆ ಯಾವಾಗ ಇದನ್ನು ಕೃತಿಯಲ್ಲಿ ಜಾರಿಗೊಳಿಸಲಾಗುತ್ತಿದೆ ?

ಶ್ರೀ ಎಂ. ವೀರಪ್ಪ ಮೊಯಿಲಿ :- ಮಾನ್ಯ ಉಪಾಧ್ಯಕ್ಷಿಣಿಯವರೇ, ಮಾನ್ಯ ಸದಸ್ಯರು ಎತ್ತಿದಂತ ವಿಚಾರವನ್ನು ಇಂಧನ ಖಾತೆಯ ಮಂತ್ರಿಗಳ ಗಮನಕ್ಕೆ ತರಲಾಗುವುದು.